**ಸರ್ ಸೀವೂಸಗೂರ್ ರಾಮಗೂಲಂ ಮತ್ತು ಸರ್ ಅನೆರುದ್ ಜುಗ್ನಾಥ್ ಸಮಾಧಿಗಳಿಗೆ ಪ್ರಧಾನಮಂತ್ರಿ ಪುಷ್ಪನಮನ (ಮಾರ್ಚ್ 11, 2025)**

ಮಾರ್ಚ್ 11, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಪ್ಯಾಂಪಲ್‌ಮೌಸೆಸ್‌ನಲ್ಲಿರುವ ಸರ್ ಸೀವೂಸಗೂರ್ ರಾಮಗೂಲಂ ಬೊಟಾನಿಕ್ ಗಾರ್ಡನ್‌ನಲ್ಲಿ ಸರ್ ಸೀವೂಸಗೂರ್ ರಾಮಗೂಲಂ ಮತ್ತು ಸರ್ ಅನೆರುದ್ ಜುಗ್ನಾಥ್ ಅವರ ಸಮಾಧಿಗಳಿಗೆ ಗೌರವ ನಮನ ಸಲ್ಲಿಸಿದರು.  ಪ್ರಧಾನಮಂತ್ರಿಯವರೊಂದಿಗೆ ಮಾರಿಷಸ್‌ನ ಪ್ರಧಾನಮಂತ್ರಿ ಶ್ರೀ ನವೀನ್ ಚಂದ್ರ ರಾಮಗೂಲಂ ಅವರು ಪುಷ್ಪಗುಚ್ಛ ಸಮರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ಮಾರಿಷಸ್‌ನ ಪ್ರಗತಿಯಲ್ಲಿ ಹಾಗೂ ಭಾರತ-ಮಾರಿಷಸ್ ಸಂಬಂಧಗಳಿಗೆ ಬಲವಾದ ಅಡಿಪಾಯವನ್ನು ನಿರ್ಮಿಸುವಲ್ಲಿ ಇಬ್ಬರು ನಾಯಕರ ಶಾಶ್ವತ ಕೊಡುಗೆಯನ್ನು ಪ್ರಧಾನಿ ಮೋದಿ ಸ್ಮರಿಸಿದರು.

2. ಪುಷ್ಪಗುಚ್ಛ ಸಮರ್ಪಣೆ ಕಾರ್ಯಕ್ರಮದ ಬಳಿಕ, ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಮತ್ತು ಮಾರಿಷಸ್‌ನ ಪ್ರಧಾನಮಂತ್ರಿ ಶ್ರೀ ನವೀನ್‌ಚಂದ್ರ ರಾಮಗೂಲಂ ಐತಿಹಾಸಿಕ ಉದ್ಯಾನದಲ್ಲಿ  –"ಏಕ್ ಪೇಡ್ ಮಾ ಕೆ ನಾಮ್" – ಎಂಬ ಉಪಕ್ರಮದ ಅಡಿಯಲ್ಲಿ ಸಸಿಯನ್ನು ನೆಟ್ಟರು.

ಪೋರ್ಟ್ ಲೂಯಿಸ್

ಮಾರ್ಚ್ 11, 2025